

ಮಹಿಳೆಯ ಪರೀಕ್ಷೆ ನಡೆಸಿ ಕೈ ತೊಳೆಯುತ್ತ ಡಾಕ್ಟರ್ ಹೇಳಿದರು: 'ಮಿಸೆಸ್ ಶರ್ಮಾ ನಿಮಗೊಂದು ಒಳ್ಳೆ ಸುದ್ದಿ ಹೇಳೋದಿದೆ...'
ಸ್ಸಾರೀ, ನಾನು ಮಿಸ್ ಶರ್ಮಾ. ಮದುವೆಯಾಗಿಲ್ಲ.
ಹಾಗಾದರೆ ನಿಮಗೊಂದು ಕೆಟ್ಟ ಸುದ್ದಿ ಹೇಳೋದಿದೆ.

ರಾತ್ರಿ ಒಂಬತ್ತಕ್ಕೆ ತುಕ್ರನ ಹೆಂಡತಿ ಹೊಗೆಸೊಪ್ಪು ತರಲು ಹೇಳಿದಳು. ಮೂರು ಕೂಗಳತೆ ದೂರದ ಅಂಗಡಿಗೆ ಹೋಗಿ ಕೇಳಿದಾಗ ಹೊಗೆಸೊಪ್ಪು ಖಾಲಿಯಾಗಿತ್ತು. ಅಷ್ಟೊತ್ತಿಗೆ ಜೋರಾಗಿ ಮಳೆ ಶುರುವಾಯಿತು. ಅಂಗಡಿಯ ಹುಡುಗಿ ಇವನ ಮಾಜಿ ಪ್ರೇಮಿ ಮನೆಯೊಳಗೆ ಕರೆದಳು. ಇಬ್ಬರೂ ಶರಾಬು ಹಾಕಿ ಮೈಮರೆತು ಮಜಾ ಮಾಡಿದರು. ತುಕ್ರ ಗಡಬಡಿಸಿ ಎದ್ದಾಗ ಬೆಳಗಾಗಿತ್ತು. ಹುಡುಗಿ, 'ರಾತ್ರಿ ಇಲ್ಲಿದ್ದೆ ಅಂತ ನಿನ್ನ ಹೆಂಡತಿಗೆ ಗೊತ್ತಾದರೆ ಪಡ್ಚ ಮಾರಾಯ' ಎಂದಳು.
ತುಕ್ರ ತಲೆ ಓಡಿಸಿದ. ಚಪ್ಪಲಿಗಳನ್ನು ಕೆಸರಲ್ಲಿ ಮುಳುಗಿಸಿದ. ಮುಂಡದ ಅಂಚನ್ನೂ ಕೆಸರು ಮಾಡಿದ. ಮನೆಗೆ ಹೋಗಿ ಹೆಂಡತಿಗೆ ಹೇಳಿದ. 'ಹೊಗೆಸೊಪ್ಪು ಇರಲಿಲ್ಲ. ರಾತ್ರಿ ಹುಡುಗಿಯ ಜೊತೆ ಮಲಕ್ಕೊಂಡಿದ್ದೆ'. ತುಕ್ರಿ ಅವನನ್ನು ತಲೆಯಿಂದ ಕಾಲಿನ ತನಕ ನೋಡಿ, ಮುಖ ತಿವಿದು ಬೈದಳು.
'ನನ್ನಲ್ಲಿ ಎಂತ ಸುಳ್ಳು ಹೇಳೋದು ನೀ. ರಾತ್ರಿಯೆಲ್ಲಾ ಗದ್ದೆಯಲ್ಲಿ ಏಡಿ ಹಿಡೀತಾ ಕುಂತ್ಕಂಡಿದ್ದಿ, ಒಂದು ಸಿಗಲಿಲ್ಲ. ನಿನ್ ಬುದ್ದಿ ನನಗೊತ್ತು. ಕೈಕಾಲು ಮುಖ ತೊಳಕೋ. ಗಂಜಿ, ಮೀನುಸಾರು ಮಾಡಿದೀನಿ ಉಣ್ಣು'!

***

ತುಕ್ರ ಬೈಸಿಕಲ್ ತಗೊಂಡು ಶರಾಬು ಅಂಗಡಿಗೆ ಹೋದ. ಎರಡು ಶೀಶೆ ಕೊಂಡುಕೊಂಡ. ಅದನ್ನ ಬೈಸಿಕಲ್ ಬಾಸ್ಕೆಟ್ ನಲ್ಲಿ ಇಟ್ಟುಕೊಂಡರೆ ಅಕಸ್ಮಾತ್ ಆಯತಪ್ಪಿ ಬಿದ್ದುಬಿಟ್ಟರೆ ಶೀಶೆ ಒಡೆದುಹೋಗುತ್ತವೆ ಎಂದು ಯೋಚಿಸಿ ಅಲ್ಲೇ ಬಾಟಲ್ ಖಾಲಿ ಮಾಡಿದ.
ಅವನ ನಿರ್ಧಾರ ಸರಿಯಾಗಿತ್ತು. ಮನೆ ಮುಟ್ಟುವಷ್ಟರಲ್ಲಿ ತುಕ್ರ ಬೈಸಿಕಲ್ ಮೇಲಿಂದ ಆರು ಸಲ ಬಿದ್ದಿದ್ದ.

***

ತುಕ್ರ ಕೇಳಿದ: 'ಸ್ವಾಮೀಜಿ, ನಾನು ಪ್ರಾರ್ಥನೆ ಮಾಡಬೇಕಾದರೆ ಕುಡಿಯಬಹುದೇ?' ಖಂಡಿತ ಇಲ್ಲ ಎಂದು ಉತ್ತರ ಬಂತು. 'ನಾನು ಕುಡಿಯುತ್ತಿರುವಾಗ ಪ್ರಾರ್ಥನೆ ಮಾಡಬಹುದೇ?' ಖಂಡಿತ ಎಂದು ಸ್ವಾಮೀಜಿ ಆಶೀರ್ವದಿಸಿದರು. ಅಂದಿನಿಂದ ತುಕ್ರ ಎಚ್ಚರವಾಗಿರುವ ಹೆಚ್ಚಿನ ಸಮಯ ಪ್ರಾರ್ಥನೆ ಮಾಡುತ್ತಿರುತ್ತಾನೆ.

***

ಕೂಡು ರಸ್ತೆಯಲ್ಲಿ ಇವನು ನಿಂತುಕೊಂಡು
'ಬಂಟ್ವಾಳಕ್ಕೆ ಬೇಗ ಹೋಗಬೇಕು. ಹೇಗೆ ಹೋಗೋದು?' ಎಂದ.
ಪೆಟ್ಟಿಗೆ ಅಂಗಡಿಯವನು, 'ಕಾರಲ್ಲಿ ಹೋಗುವುದೋ ನಡ್ಕೊಂಡು ಹೋಗುವುದೋ?' ಎಂದು ಕೇಳಿದ.
ಇವನು ಕಾರಿನಲ್ಲಿ ಎಂದದ್ದಕ್ಕೆ
ಉತ್ತರ: 'ಹಾಗಾದ್ರೆ ಬೇಗ ಹೋಗುತ್ತಿರಿ ಬಿಡಿ, ಯೋಚನೆ ಇಲ್ಲ'!

***

ವೃದ್ಧ ದಂಪತಿ ತಮ್ಮ ಪರಿಚಯದ ದಂಪತಿಯನ್ನು ಊಟಕ್ಕೆ ಕರೆದಿದ್ದರು. ಊಟದ ನಂತರ ಹೆಂಗಸರು ಅಡುಗೆ ಮನೆಯಲ್ಲಿ ಇದ್ದಾಗ ಗಂಡಸರು ಹಜಾರದಲ್ಲಿ ಕೂತು ಎಲೆ ಅಡಿಕೆ ಜಗಿಯುತ್ತ ಮಾತಾಡುತ್ತಿದ್ದರು. ಇವನು ಹೇಳಿದ. 'ಮೊನ್ನೆ ಹೊಸ ರೆಸ್ಟೋರೆಂಟಿಗೆ ಹೋಗಿದ್ವಿ. ಊಟ ಬಹಳ ರುಚಿಕಟ್ಟಾಗಿತ್ತು'. ರೆಸ್ಟೋರೆಂಟಿನ ಹೆಸರೇನೆಂದು ಸ್ನೇಹಿತ ಕೇಳಿದ.
ಇವನು ಒದ್ದಾಡಿದರೂ ನೆನಪಾಗಲಿಲ್ಲ. 'ಒಂದು ದೊಡ್ಡ ಹೂವು... ಗುಲಾಬಿ ಹಾಗೂ ಬಿಳಿ ಬಣ್ಣದ್ದು... ಕೊಳದಲ್ಲಿ ಬೆಳೆಯುತ್ತದೆ. ಲಕ್ಷ್ಮಿಯ ಕೈಯಲ್ಲಿರುತ್ತದೆ. ಅದರ ಹೆಸರೇನು?' ಸ್ನೇಹಿತ ಹೇಳಿದ 'ಕಮಲ ಅಲ್ವೇ?' 'ಹಾಂ, ನೆನಪಾಯಿತು'! ಎಂದು, ಅಡುಗೆ ಕೋಣೆಯ ಕಡೆ ತಿರುಗಿ ಗಟ್ಟಿಯಾಗಿ ಕೂಗಿದ. 'ಕಮಲಾ, ಮೊನ್ನೆ ಹೋಗಿದ್ದೆವಲ್ಲ, ಆ ರೆಸ್ಟೋರೆಂಟ್ ಹೆಸರೇನು'?

***

ಅಮೆರಿಕದಲ್ಲಿ ಇದ್ದ ಮಗಳಿಗೆ ಅಪ್ಪ ಫೋನ್ ಮಾಡಿ ಹೇಳಿದ: 'ನಿಮ್ಮಮ್ಮನ ಜೊತೆಗೆ ಬಾಳುವೆ ಮಾಡಲು ಸಾಧ್ಯವೇ ಇಲ್ಲ. ಇವೊತ್ತೇ ವೃದ್ಧಾಶ್ರಮಕ್ಕೇ ಹೋಗುತ್ತಿದ್ದೇನೆ'.
ಮಗಳು ಗಾಬರಿಯಿಂದ ಹೇಳಿದಳು. 'ದಯವಿಟ್ಟು ಬೇಡಪ್ಪ. ಸ್ವಲ್ಪ ಇರಿ'. ಎಂದು ಸ್ವಲ್ಪ ಹೊತ್ತಿನ ನಂತರ ಕರೆಮಾಡಿ ಹೇಳಿದಳು. 'ಅಣ್ಣನಿಗೂ ಹೇಳಿದೆ. ಆತ ಲಂಡನ್‌ನಿಂದ ಹೊರಡುತ್ತಾನೆ. ನಾವಿಬ್ಬರೂ ಈ ಭಾನುವಾರ ಬೆಳಿಗ್ಗೆ ತಪ್ಪದೆ ಅಲ್ಲಿರುತ್ತೇವೆ. ಅಲ್ಲಿಯ ತನಕ ಏನಾದರೂ ಮಾಡಿದರೆ ನನ್ನಾಣೆ'!
ಅಪ್ಪ ಒಪ್ಪಿ ಫೋನ್ ಕೆಳಗಿಡುತ್ತ ಹೆಂಡತಿಗೆ ಸಂಭ್ರಮದಿಂದ ಹೇಳಿದ. 'ಈಸಲ ನಮ್ಮ ಮೂವತ್ತನೇ ವಿವಾಹ ವಾರ್ಷಿಕೋತ್ಸವಕ್ಕೆ ಮಕ್ಕಳಿಬ್ಬರೂ ಸಂಸಾರ ಸಮೇತ ಬರುತ್ತಿದ್ದಾರೆ. ಅವರ ಮುಖ ನೋಡಿ ನಾಲ್ಕು ವರ್ಷ ಆಯಿತು, ಅಲ್ಲವೇ?'

***

ವಯಸ್ಸಾದ ಹಳ್ಳಿಗ ರಸ್ತೆ ದಾಟುವಾಗ ವಾಹನಕ್ಕೆ ಡಿಕ್ಕಿ ಹೊಡೆದು ತಲೆಗೆ ಪೆಟ್ಟಾಯಿತು. ಆಸ್ಪತ್ರೆಯಲ್ಲಿ ವೈದ್ಯರು ಪರೀಕ್ಷೆ ಮಾಡುತ್ತ ಕೇಳಿದರು: 'ನೀನು ಎಲ್ಲಿದ್ದೀ ಗೊತ್ತಾ'? 'ಸರ್ಕಾರಿ ಆಸ್ಪತ್ರೆಯಲ್ಲಿ ಸ್ವಾಮಿ'. 'ಇದು ಯಾವೂರು ಗೊತ್ತಾ'? 'ತುಮಕೂರು ಸ್ವಾಮಿ'. 'ನಾನು ಯಾರು ಗೊತ್ತಾ'? 'ನೀವು ಡಾಕ್ಟರ್ ವೀರಭದ್ರಯ್ಯ ಅಲ್ವೇ ಸ್ವಾಮಿ'? ಡಾಕ್ಟರ್ ಉಬ್ಬಿ, 'ಸರಿ, ಇವನ ಮೆದುಳಿಗೆ ಏಟಾಗಿಲ್ಲ, ಮನೆಗೆ ಹೋಗಬಹುದು' ಎಂದುಬಿಟ್ಟರು. ಆಸ್ಪತ್ರೆಯ ಹೊರಗೆ ಕಾಲಿಡುತ್ತಲೇ ಮುದುಕ ನಿಟ್ಟುಸಿರುಬಿಡುತ್ತ ಹೆಂಡತಿಗೆ ಹೇಳಿದ. 'ಪುಣ್ಯ, ಡಾಕ್ಟರ್ ವಯ್ಯ ನಾಲ್ಕನೇ ಪ್ರಶ್ನೆ ಏನು ಕೇಳ್ತಾನೆ ಅಂತ ಭಯವಾಗಿತ್ತು. 'ಯಾಕೆ?' 'ಆ ಮೂರು ಪ್ರಶ್ನೆಗಳ ಉತ್ತರ ಡಾಕ್ಟರ್ ಕೋಟಿನಮೇಲೆ ಅಂಟಿಸಿದ ಚೀಟಿಯಲ್ಲಿತ್ತು'.

***

ರೈತನೊಬ್ಬ ಭರ್ಜರಿಯಾಗಿ ಬೆಳೆದ ಕಲ್ಲಂಗಡಿ ಬೆಳೆಗೆ ರಾತ್ರೋರಾತ್ರಿ ಊರ ಮಕ್ಕಳು ಹಣ್ಣು ಲಗ್ಗೆ ಇಡುತ್ತಿದ್ದರು. ಅವನೊಂದು ಉಪಾಯ ಮಾಡಿದ. ಒಂದು ಸೂಚನೆ ಬರೆದು ಕೋಲುನೆಟ್ಟು ನೇತುಹಾಕಿದ. 'ಎಚ್ಚರಿಕೆ: ಈ ಹಣ್ಣುಗಳಲ್ಲಿ ಒಂದಕ್ಕೆ ವಿಷದ ಇಂಜೆಕ್ಷನ್ ಚುಚ್ಚಲಾಗಿದೆ'! ಪರಿಣಾಮ? ಒಂದು ದಿನ ಏನೂ ಕಳವಾಗಲಿಲ್ಲ. ಮೂರನೇ ದಿನ ಬರಹದ ಕೆಳಗೆ ಇನ್ನೊಂದು ವಾಕ್ಯ ಸೇರಿಸಲಾಗಿತ್ತು. 'ಒಂದಲ್ಲ, ಎರಡು ಹಣ್ಣುಗಳಲ್ಲಿ ವಿಷವಿದೆ'.

***

ಇಬ್ಬರು ಸ್ನೇಹಿತರು ಕಾಡಿನೊಳಗೆ ಸಾಗುತ್ತಿರುವಾಗ ಎದುರಿಗೆ ಚಿರತೆಯನ್ನು ಕಂಡರು. ಅದು ನಿಧಾನವಾಗಿ ಇವರ ಕಡೆ ಬರುತ್ತಿತ್ತು. ಅವರಲ್ಲೊಬ್ಬ ತಕ್ಷಣವೇ ಮಂಡಿಯೂರಿ ಕುಳಿತು ಶೂ ಲೇಸ್ ಭದ್ರವಾಗಿ ಕಟ್ಟಿಕೊಳ್ಳಲು ಶುರುಮಾಡಿದ. ಇನ್ನೊಬ್ಬ ಹೇಳಿದ. 'ಓಡುವುದರಿಂದ ಪ್ರಯೋಜನ ಇಲ್ಲ. ಚಿರತೆ ಮನುಷ್ಯರಿಗಿಂತ ವೇಗವಾಗಿ ಓಡುತ್ತದೆ ಅಂತ ಗೊತ್ತಿಲ್ವಾ?' ಇವನು ಹೇಳಿದ: 'ಗೊತ್ತು. ಚಿರತೆಯನ್ನು ಮೀರಿಸಿ ಓಡುವ ಅಗತ್ಯವಿಲ್ಲ. ನಿನ್ನನ್ನು ಮೀರಿಸಿದರೆ ಸಾಕು'!

(ಸಂಗ್ರಹ– ಸಂಸ್ಕರಣೆ): ವಿನೋದ ಭೆಬ್ಬಿ